### ಇಂದಿನ ತಲೆಮಾರಿಗೆ ಅಗತ್ಯವಾದ ಧಾರಾವಾಹಿ

‘ಡಾಕ್ಟರ್ ಸಾಹೇಬ್; ರಾಮಮನೋಹರ ಲೋಹಿಯಾ ಜೀವನಯಾನ’ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಇಂದಿನ ತಲೆಮಾರಿನವರಿಗೆ ಲೋಹಿಯಾ ಅವರ ಜೀವನದ ಬಗ್ಗೆ ತಿಳಿಸಿಕೊಡುವುದು ತುಂಬಾ ಅಗತ್ಯ. ನಟರಾಜ್ ಹುಳಿಯಾರ್ ಅವರಿಗೆ ಧನ್ಯವಾದಗಳು. ಮನುಷ್ಯರು ಎಳೆಯುತ್ತಾರೆ ಎನ್ನುವ ಕಾರಣಕ್ಕೆ ಲೋಹಿಯಾ ಅವರು ಸೈಕಲ್ ರಿಕ್ಷಾದಲ್ಲಿ ಕುಳಿತುಕೊಳ್ಳುತ್ತಿರಲಿಲ್ಲವಂತೆ. ಆದರೆ ತಮ್ಮನ್ನು ಲೋಹಿಯಾವಾದಿಗಳೆಂದು ಹೇಳಿಕೊಂಡು ಏಳು ಪೀಳಿಗೆ ಕುಳಿತು ತಿನ್ನುವಷ್ಟು ಸಂಪತ್ತನ್ನು ಗಳಿಸಿರುವ ಅನೇಕ ಡೋಂಗಿ ಸಮಾಜವಾದಿ ರಾಜಕಾರಣಿಗಳು ಇಂದಿನ ರಾಜಕೀಯದಲ್ಲಿದ್ದಾರೆ. ಲೋಹಿಯಾರವರ ಜೀವನ ಚರಿತ್ರೆಯನ್ನು ಅವರು ಓದಿ ಬುದ್ಧಿ ಕಲಿತರೆ ಸಾರ್ಥಕವಾದೀತು.

—ಮುರಲೀಧರ ಕುಲಕರ್ಣಿ, ಬೀದರ್

### ತಿಳಿಯುವುದು ಬಹಳಷ್ಟಿದೆ

ಲೇಖಕರಾದ ನಟರಾಜ್ ಹುಳಿಯಾರ್ ಅವರ ‘ಡಾಕ್ಟರ್ ಸಾಹೇಬ್’, ‘ಸುಧಾ’ದಲ್ಲಿ ಪ್ರಕಟವಾಗುತ್ತಿರುವುದು ಆನಂದದ ಸಂಗತಿ. ರಾಮಮನೋಹರ ಲೋಹಿಯಾ ಅವರ ಕುರಿತ ಧಾರಾವಾಹಿ ಮೊದಲ ಕಂತು ಓದಿ ತುಂಬಾ ಸಂತೋಷವಾಯಿತು. ಲೋಹಿಯಾ ಅವರ ಕುರಿತು ತಿಳಿದುಕೊಳ್ಳಲು ಬಹಳಷ್ಟು ಸಂಗತಿಗಳಿವೆ. ಮುಂದಿನ ಕಂತಿಗಾಗಿ ಕಾಯುತ್ತಿರುವೆ.

—ವಲಿ ಆರ್., ಹಿರಿಯೂರು



### ಸಸ್ಯಸಂಪತ್ತಿನ ಪರಿಚಯ

‘ಕುಂಕುಮ ಮರದ ಅನನ್ಯ ಕಥೆ’ (ಏ. 11, ವಿನು ಗಂಗೆ) ‘ಮರಗಳ ಕಥೆ’ ಓದಿ ಅಚ್ಚರಿ ಆಯಿತು. ಈ ತರಹ ಒಂದು ಮರವಿದೆ ಎಂದೇ ನನಗೆ ತಿಳಿದಿರಲಿಲ್ಲ. ಇಂಥ ಅಪರೂಪದ ಮರಗಳ ಬಗ್ಗೆ ತಿಳಿಸಿಕೊಡುತ್ತಿರುವ ಲೇಖಕಿಗೆ ಧನ್ಯವಾದ.

—ಕೆ. ಗಣೇಶ ರಾಜ, ಬೆಂಗಳೂರು




### ಜಿಹ್ವಾಚಾಪಲ್ಯಕ್ಕಿಂತ ಆರೋಗ್ಯ ಹೆಚ್ಚು

‘ರುಚಿಕರವಾದುದೆಲ್ಲ ಆರೋಗ್ಯಕರವಲ್ಲ...’ (ಏ.11, ಸುಮಲತಾ ಎನ್.) ಮುಖಪುಟ ಲೇಖನ ಮಾಹಿತಿಪೂರ್ಣವಾಗಿದೆ. ರುಚಿಗಾಗಿ ಆರೋಗ್ಯದ ಮೇಲಿನ ಕೆಟ್ಟ ಪರಿಣಾಮವನ್ನೂ ಲೆಕ್ಕಿಸದೆ, ಆರೋಗ್ಯಕ್ಕೆ ಮಾರಕವಾಗುವಂಥ ಪದಾರ್ಥಗಳನ್ನು ಉಪಯೋಗಿಸುವ, ಸೇವಿಸುವ ಜನರಿಗೆ ಎಚ್ಚರಿಕೆ ನೀಡುವಂಥ ಲೇಖನ. ಜಿಹ್ವಾಚಾಪಲ್ಯ ತೀರಿಸಿಕೊಳ್ಳುವ ಸಲುವಾಗಿ ಆರೋಗ್ಯವನ್ನು ಪಣಕ್ಕೊಡ್ಡುವ ಜನರು ಕೊಂಚವಾದರೂ ಜಾಗ್ರತರಾಗಬೇಕು.

—ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

### ಎಂಥ ವಿಪರ್ಯಾಸ!

ಆಹಾರದಲ್ಲಿ ಕೆಲವು ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿಯಾಗಿರುತ್ತವೆ. ಆದರೆ ನಾಲಿಗೆ ರುಚಿಯನ್ನೇ ಮುಂದಿಟ್ಟುಕೊಂಡು ಆರೋಗ್ಯವನ್ನು ನಿರ್ಲಕ್ಷಿಸುತ್ತಿದ್ದೇವೆ.

ಈಗ ಹೋಟೆಲ್‌ಗಳಲ್ಲಿ ಮನೆ ಮಾದರಿ ಊಟ ಸಿಗುತ್ತಿದೆ. ‘ನಾವು ಯಾವುದೇ ರೀತಿಯ ಕೃತಕ ಬಣ್ಣ ಬಳಸುವುದಿಲ್ಲ, ಅಜಿನೊಮೊಟೊ ಬಳಸುವುದಿಲ್ಲ’ ಎಂದೆಲ್ಲ ಬೋರ್ಡ್ ಹಾಕಿರುತ್ತಾರೆ. ಆದರೆ ಮನೆಗಳಲ್ಲಿ ಹೋಟೆಲ್ ಮಾದರಿ ಆಹಾರ ತಯಾರಿಸಲು ಆರಂಭಿಸಿದ್ದಾರೆ. ಎಂತಹ ವಿಪರ್ಯಾಸ! ಆಹಾರ ಔಷಧವಾಗಬೇಕೇ ಹೊರತು ಅನಾರೋಗ್ಯ ತರಬಾರದು. ಊಟ ಬಲ್ಲವನಿಗೆ ರೋಗವಿಲ್ಲ ಸರಿ, ಆದರೆ ಎಂತಹ ಊಟ ಎಂಬುದನ್ನು ಊಟ ಮಾಡುವವರಷ್ಟೇ ಅಲ್ಲ, ತಯಾರಿಸುವವರೂ ಅರಿತಿರಬೇಕು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ



### ಹೊಗೆಯಾಡುವ ಜಾತಿ ವೈಷಮ್ಯ

‘ಜೆಸಿಬಿ ಮಾಲಿಂಗ’ (ಏ. 11, ಬಿ.ಎಲ್. ವೇಣು) ಕಥೆ ಗ್ರಾಮ್ಯ ಭಾಷೆಯಲ್ಲಿ ಹಳ್ಳಿಗರ ಅಳಲನ್ನು, ಜಾತಿಯ ಹರವನ್ನು ಹದವಾಗಿ ವಿಸ್ತರಿಸಿದೆ. ಕೆಲವೊಂದು ಹಳ್ಳಿಗಳಲ್ಲಿ ಈಗಲೂ ಹೊಗೆಯಾಡುತ್ತಿರುವ ಜಾತಿ ವೈಷಮ್ಯ, ಅಸ್ಪೃಶ್ಯತೆಗೆ ಒಂದು ನಿದರ್ಶನದಂತಿತ್ತು. ಕೊನೆಯಲ್ಲಿ ಎಲ್ಲರ ದೇಹ ಸಪ್ತಧಾತುಗಳಿಂದಾಗಿದೆ, ಎಲ್ಲರೂ ಹುಟ್ಟುವುದು ಒಂದೇ ರೀತಿ, ಆತ್ಮ ಜೀವಗಳ ಬೆಸುಗೆ ಎಲ್ಲರಲ್ಲೂ ಇದೆ ಎಂದು ಬಹಳ ಮಾರ್ಮಿಕವಾಗಿ ಪ್ರತಿಪಾದಿಸಿದ್ದಾರೆ.

—ಉಷಾಲಕ್ಷ್ಮಿ ಅರವಿಂದ ಹೊಳ್ಳ

### ಉತ್ತಮ ಉದಾಹರಣೆ

‘ಪುಟ್ಟನ ಕೊಳಲು’ (ಏ. 11, ಕೆ.ಬಿ. ರಂಗಸ್ವಾಮಿ) ‘ಎಳೆಯರ ಅಂಗಳ’ದಲ್ಲಿ ಪ್ರಕಟವಾಗಿರುವ ಮಕ್ಕಳ ಪದ್ಯ, ಅವರ ಲಯ ಭಂಗವಾದಲ್ಲಿ ರಸಭಂಗಕ್ಕೂ ಹೇಗೆ ಮೂಲವಾಗಬಲ್ಲದು ಎಂಬುದಕ್ಕೆ ಉತ್ತಮ ಉದಾಹರಣೆ.

—ಶ್ರೀಧರ ಪಿಸ್ಸೆ

### ‘ತೇಲಿಕಟ್ಟಾ’ ನೆನಪಿಗೆ ಬಂತು

‘ಬೇಲಿ ಚಟಕದ ಬಾಣಂತನ’ (ಏ. 11, ಎಸ್. ಶಿಶುಪಾಲ) ‘ಪಕ್ಷಿಲೋಕ’ ಲೇಖನ ಸುಂದರವಾಗಿದೆ. ಬೇಲಿಚಟಕ ಹಕ್ಕಿಯ ಕುರಿತ ಲೇಖನ ಓದಿದಾಗ ನೆನಪಿಗೆ ಬಂದದ್ದು ಮಲೆನಾಡಿನಲ್ಲಿ ಮಳೆಗಾಲದ ಸೂಚನೆ ನೀಡುವ ‘ತೇಲಿಕಟ್ಟಾ’ ಎಂಬ ಹೆಬ್ಬೆರಳು ಗಾತ್ರದ ಪುಟ್ಟಹಕ್ಕಿ. ಈ ತೇಲಿಕಟ್ಟಾ, ಭೂಮಿಗೆ ಹತ್ತಿರದಲ್ಲಿ ಹಾರಾಡಿದರೆ ಒಂದೆರಡು ದಿನದಲ್ಲಿ ಮಳೆ ಆರಂಭ ಎನ್ನುತ್ತಾರೆ ಅನುಭವಸ್ಥರು. ಪಕ್ಷಿಗಳ ಪ್ರಪಂಚದಲ್ಲಿ ನಮಗೆ ಅಚ್ಚರಿ ತರುವ ಅನೇಕ ಮಾಹಿತಿಗಳಿವೆ. ಈ ಅಪರೂಪದ ಮಾಹಿತಿ ನೀಡಿದ ಲೇಖಕರಿಗೆ ಧನ್ಯವಾದಗಳು.



—ರಾಜೀವ್ ಎನ್. ಮಾಗಲ್, ಹಾಸನ

### ಪಕ್ಷಿಲೋಕದ ಅಚ್ಚರಿ

‘ಪಕ್ಷಿಲೋಕ’ದ ಬರಹ ತುಂಬಾ ಇಷ್ಟವಾಯಿತು. ಪಕ್ಷಿಪ್ರಪಂಚದ ಇಂಥ ಎಷ್ಟೋ ಸಂಗತಿಗಳು ಪ್ರಕೃತಿಯಲ್ಲಿ ಅವ್ಯಕ್ತವಾಗಿಯೇ ಉಳಿದುಬಿಡುತ್ತವೆ. ಪ್ರಕೃತಿಯ ಉಳಿವಿಗೆ ಅವುಗಳ ಕೊಡುಗೆ ದೊಡ್ಡದಾಗಿರುತ್ತದೆ. ನಿಸರ್ಗದೊಂದಿಗೆ ಸದಾ ಹೊಂದಿಕೊಂಡು ಬದುಕುವ ಇಂತಹ ಹಕ್ಕಿಗಳ ಉಳಿವು ನಮಗೆ ಬದುಕಲು ಉತ್ತಮ ಮಾದರಿ.

—ನಾಗರಾಜ ಬಿ. ನಾಯ್ಕ, ಕುಮಟಾ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in